<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 1127-25** **ಪಿಡಬ್ಲ್ಯೂ ಃ** <u>**1**</u>

**ಸಿಡಬ್ಲ್ಯೂ ಃ** <u>**1**</u>

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಹುಲಿಯಪ್ಪ ಧುಳಪ್ಪಗೋಳ |
| ತಂದೆ ಹೆಸರು | ಃ | ಲಕ್ಕಪ್ಪ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಸೆಕ್ಯುರಿಟಿ |
| ವಾಸಸ್ಥಳ | ಃ | ಬೆಳಗಾವಿ |

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 29.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಅಂದಾಜು ಒಂದು ವರ್ಷದ ಹಿಂದೆ ನಾನು ರೇಲ್ವೆ ಆಸ್ಪತ್ರೆಯಲ್ಲಿ ಸೆಕ್ಯುರಿಟಿ ಗಾರ್ಡ ಅಂತಾ ಕೆಲಸ ಮಾಡುತ್ತಿದ್ದೆನು. ಒಬ್ಬ ರೇಲ್ವೆ ಸಿಬ್ಬಂದಿ ಆಟೋದಲ್ಲಿ ಆಟೋ ಚಾಲಕ ಚಿಕಿತ್ಸೆಗೆ ಕರೆದುಕೊಂಡು ಬಂದನು. ಸದರಿ ಗಾಯಾಳುವನ್ನು ಐ ಸಿ ಯು ದಲ್ಲಿ ದಾಖಲ್ ಮಾಡಿದರು. ಗಾಯಾಳು ಹೆಸರು ಗೊತ್ತಿಲ್ಲ. ಅಪಘಾತ ವು ಹೇಗೆ ಆಗಿದೆ ಎಂದು ಗೊತ್ತಿಲ್ಲ. ಪೋಲಿಸರು ಎರಡು ದಾಖಲೆ ಮೇಲೆ ಸಹಿ ಪಡೆದಿದ್ದಾರೆ. ಸದರಿ ಎರಡು ದಾಖಲೆಗಳು ದೂರು ಹಾಗೂ ಪಂಚನಾಮೆಯಾಗಿದ್ದು, ಸದರಿ ದೂರನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.1-ಎ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ನಿಪಿ.2 ಎಂದು ಗುರುತಿಸಲಾಯಿತು. ಸಹಿ ನಿಪಿ.2-ಎ ಎಂದು ಗುರುತಿಸಲಾಯಿತು. ಸಾಕ್ಷಿಯೂ ಪಂಚನಾಮೆ ಕಾಲಕ್ಕೆ ತೆಗೆದ ಪೊಟೋ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.3 ಎಂದು ಗುರುತಿಸಲಾಯಿತು. ನಿಪಿ.1 ಹಾಗೂ 2 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಅಪಘಾತ ವು ಯಾರಿಂದ, ಯಾರಿಗೆ ಹಾಗೂ ಯಾವಾಗ ಆಗಿದೆ ಎಂದು ಗೊತ್ತಿಲ್ಲ. ನಾನು ಪುನರ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಆಟೋದಲ್ಲಿ ನೋಡಿದ್ದೆನು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ  ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 22.2.2025 ರಂದು ಬೆಳಗಿನ ಜಾವ 7 ಗಂಟೆಗೆ ನ್ಯಾಯಾಲಯದ ಮುಂದಿರುವ ಆರೋಪಿ ರೇಲ್ವೆ ಮುಜೆಯಿಂ ಬಳಿ ಆಟೋ ನಂಃ ಕೆಎ-25 ಡಿ/ 8350 ನೇದ್ದನ್ನು ರೇಲ್ವೆ ನಿಲ್ದಾಣದ ಕಡೆಯಿಂದ ವೇಗವಾಗಿ ಚಲಾಯಿಸಿ ರೋಡನ್ನು ಚಲಾಯಿಸುತ್ತಿದ್ದ ಚನಬಸಪ್ಪ ತಂದೆಃ ಸಕ್ರಪ್ಪ ಕುಂಬಾರ ರವರಿಗೆ ಡಿಕ್ಕಿಪಡಿಸಿ ಗಾಯಪಡಿಸಿದನು ಅಂದರೆ ಗೊತ್ತಿಲ್ಲ.  ನಂತರ ಗಾಯಾಳುವನ್ನು ಚಿಕಿತ್ಸೆಗೆ ರೇಲ್ವೆ ಆಸ್ಪತ್ರೆಗೆ ಕಳಿಸಿದೆವು ಅಂದರೆ ಸರಿಯಲ್ಲ.  ನಂತರ ಗಾಯಾಳುವನ್ನು ಸುಚಿರಾಯು ಆಸ್ಪತ್ರೆಗೆ ಕರೆದುಕೊಂಡು ಹೋದರು ಅಂದರೆ ಗೊತ್ತಿಲ್ಲ.  ಆರೋಪಿತನು ಆಟೋವನ್ನು ಅತಿ ವೇಗ ಹಾಗೂ ಅಲಕ್ಷ್ಯತನದಿಂದ ಚಲಾಯಿಸಿ ಮೃತನಿಗೆ ಡಿಕ್ಕಿಪಡಿಸಿ ಅಪಘಾತ ಪಡಿಸಿದ್ದಾನೆ ಅಂದರೆ ಸರಿಯಲ್ಲ.  ನಾನು ಈ ಕುರಿತು ನಿಪಿ.1 ರಂತೆ ದೂರು ನೀಡಿದ್ದೇನೆ ಅಂದರೆ ಸರಿಯಲ್ಲ.  ದಿಃ 22.2.2025 ರಂದುಘಟನಾ ಸ್ಥಳದಲ್ಲಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಹಾಗೂ 3 ರವರ ಸಮಕ್ಷಮ ಪೋಲಿಸರು ಸಂಜೆಃ 6.35 ರಿಂದ 6.50 ವರೆಗೆ ಸ್ಥಳ ಪಂಚನಾಮೆ ನಿಪಿ.2 ರಂತೆ ಮಾಡಿ ನನ್ನ ಸಹಿ ಮಾಡಿದ್ದಾರೆ ಅಂದರೆ ಸರಿಯಲ್ಲ.  ನಿಪಿ.2 ರ ಪಂಚನಾಮೆ ಕಾಲಕ್ಕೆ ನಿಪಿ.3 ರ ಪೊಟೋ ತೆಗೆದಿದ್ದಾರೆ ಅಂದರೆ ಸರಿಯಲ್ಲ.  ಈ ಬಗ್ಗೆ ಅದೇ ದಿನ ಈಗ ಓದಿ ಹೇಳಿದಂತೆ --------- ಪುನರ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ.  ಸದರಿ ಪುನರ ಹೇಳಿಕೆಯನ್ನು ನಿಪಿ.4 ಎಂದು ಗುರುತಿಸಲಾಯಿತು.  ಅದೇ ರೀತಿ ದಿಃ 28.2.2025 ರಂದು ನ್ಯಾಯಾಲಯದ ಮುಂದಿರುವ ಆರೋಪಿ ಹೆಸರು ಉದಯ ಅಲಿಯಾಸ್ಃ ಮುಲ್ಯಾ ತಂದೆಃ ಶಂಕರ ಕಾಡ್ಯಾ ಎಂದು ಗೊತ್ತಾಗಿದೆ ಎಂದು ಪುನರ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ.  ಸದರಿ ಪುನರ ಹೇಳಿಕೆ ಯನ್ನು ನಿಪಿ.5 ಎಂದು ಗುರುತಿಸಲಾಯಿತು.  ದಿಃ27.3.2025 ರಂದು ಗಾಯಾಳು ಮರಣ ಹೊಂದಿದ ಬಗ್ಗೆ ಪುನರ ಹೇಳಿಕೆ ನೀಡಿದ್ದೇವೆ ಅಂದರೆ ಸರಿಯಲ್ಲ.  ಸದರಿ ಪುನರ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು.  ನಿಪಿ.1 ರಿಂದ 6 ರಲ್ಲಿರುವ ವಿಷಯ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲವೆಂದು ಹೇಳಿದ್ದಾರೆ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**C.C. - 1127-25** **ಪಿಡಬ್ಲ್ಯೂಃ 2**
**ಸಿಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು ಃ ಸಂಗಮೇಶ ಪಟ್ಟಣದ

ತಂದೆ ಹೆಸರು ಃ ರಾಮಲಿಂಗಪ್ಪ

ವಯಸ್ಸು ಃ 45 ವರ್ಷ

ಉದ್ಯೋಗ ಃ ಉಪನ್ಯಾಸಕ

ವಾಸಸ್ಥಳ ಃ ತಳೆವಾಡ ಗ್ರಾಮ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 29.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 22.2.2025 ರಂದು ಸಂಜೆಃ 6.35 ಗಂಟೆಯಿಂದ 6.50 ಗಂಟೆವರೆಗೆ ಪೋಲಿಸರು ನನ್ನ ಹಾಗೂ ಚಾಸಾ-2 ರ ಸಮಕ್ಷಮ ನಿಪಿ.2 ರಂತೆ ರೇಲೆ ಮುಜೆಯಂ ಎದುರುಗಡೆ ಪಂಚನಾಮೆ ಮಾಡಿದ್ದಾರೆ. ಸ್ಥಳವನ್ನು ಚಾಸಾ-1 ರವರು ತೋರಿಸಿದ್ದಾರೆ. ಸದರಿ ಪಂಚನಾಮೆಯನ್ನು ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.2-ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.3 ನ್ನು ನೋಡಿ ಗುರುತಿಸಿದ್ದಾರೆ. ಪಂಚನಾಮೆ ಕಾಲಕ್ಕೆ ನಿಪಿ.3 ನ್ನು ಪೋಟೋ ತೆಗೆದಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಂ ಪಿ, ವಕೀಲರಿಂದಃ**

ಮೃತ ಚನಬಸಪ್ಪ ನನಗೆ ಮಾವನಾಗಬೇಕು. ಪೊಟೋ ತೆಗೆಯುವಾಗ ಚಾಸಾ-1 ರವರು ಇದ್ದರು. ಅವರ ಜೊತೆಗೆ ಮಾತನಾಡಿಲ್ಲ. ಘಟನಾ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ ಅಂದರೆ ಸರಿಯಲ್ಲ. ರೋಡ ಗದಗ ಕಡೆಯಿಂದ ಹುಬ್ಬಳ್ಳಿ ಕಡೆಗೆ ಹೋಗುತ್ತಿತ್ತು.

ನಿಪಿ.2 ರಲ್ಲಿರುವ ನಕಾಶೆಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಅಂದರೆ ಸರಿ. ಚನಬಸಪ್ಪ ರವರು ಪರಿಚಯವಿರುವುದರಿಂದ ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.